ಅಸಲು ದಾವೆ ನಂ.37/2022
ಪಿ.ಡಬ್ಲ್ಯೂಃ 2- ಸೈಯದ್ ಅಜಮತ್‌ಉಲ್ಲಾ ಬಿನ್ ಸೈಯದ್ ಈನಾಯತ್ ಉಲ್ಲಾ
ದಿನಾಂಕಃ 11/08/2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಎ. ಎ. ವಕೀಲರಿಂದ</u>**

**1.** ನಾನು ಐ ಟಿ ಐ ಓದಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ನನಗೆ ಗೋತ್ತು. ಪ್ರತಿವಾದಿಯರು ನನ್ನ ಜೊತೆ ಕ್ರಯದ ವ್ಯವಹಾರ ಮಾಡಿ ಕ್ರಯ ಪತ್ರ ಬರೆದು ಕೊಡದೆ ಇದುದ್ದರಿಂದ ನಾನು ಅವರ ವಿರುದ್ದ ಈ ದಾವೆ ದಾಖಲಿಸಿರುತ್ತೇನೆ. ದಾವಾ ಸ್ವತ್ತು ಸರ್ವೆ ನಂ. 56/1 ವಿಸ್ತೀರ್ಣ 2 ಎಕರೆ 20 ಗುಂಟೆ ಮತ್ತು ಸರ್ವೆ ನಂ. 56/2 ವಿಸ್ತೀರ್ಣ 30 ಗುಂಟೆ ಇರುತ್ತವೆ. ದಿನಾಂಕ 20-08-2013 ಕ್ಕಿಂತ 2-3 ದಿನಗಳ ಹಿಂ ದೆ ನನ್ನ ಮತ್ತು ಪ್ರತಿವಾದಿಯ ಮಧ್ಯೆ ಮೊದಲಿನ ಸಲ ಕ್ರಯದ ಮಾತುಕತೆ ನಡೆದಿರುತ್ತದೆ. ಸದರಿ ಮಾತುಕತೆಯು ತರೀಕೆರೆಯ ಕೊಡಿಕ್ಯಾಂಪ್‌ನಲ್ಲಿರುವ ಶುಕುರ್ ಸಾಬ್ ರವರ ಮನೆಯಲ್ಲಿ ನಡೆದಿದ್ದು ಆಗ ನಾನು, ಸೈಯದ್ ರಬಿವುಲ್ಲಾ, 1 ನೇ ಪ್ರತಿವಾದಿ ಮತ್ತು ಅನ್ಸರ್ ಸಾಬ್ ರವರು ಇದ್ದೆವು. ಆ ದಿನ ನನ್ನ ಮತ್ತು 1 ನೇ ಪ್ರತಿವಾದಿ ಮಧ್ಯೆ ರೂ.22,50,000/- ಗಳಿಗೆ 25 ಗುಂಟೆ ಜಮೀನು ಮಾರಾಟ ಮತ್ತು ಖರೀದಿ ಮಾಡುವ ಮಾತುಕತೆ ಆಗಿರುತ್ತದೆ. ನಂತರ ದಿನಾಂಕ 20-08-2013 ರಂದು ತರೀಕೆರೆಯ ಎಂ ಜಿ ರಸ್ತೆಯಲ್ಲಿ ಸುಬ್ರಹ್ಮಣ್ಯೆರವರ ಮನೆಯಲ್ಲಿ ಕರಾರು ಪತ್ರ ಬರೆಯಲಾಗಿರುತ್ತದೆ. ನಿಪಿ.1 ಅನ್ನು ಬರೆಯಲು ಒಂದನೇ ಪ್ರತಿವಾದಿಯೇ ಮಾಹಿತಿ ಕೊಟ್ಟಿರುತ್ತಾರೆ. ಪತ್ರ ಬರೆಯುವಾಗ ಮಧ್ಯಾಹ್ನ 2.30 ಗಂಟೆ ಆಗಿದ್ದು ಆಗ ನಾಗರಾಜ ನಾಯ್ಕು, ಬಸವರಾಜ ನಾಯ್ಕು, ನಾನು, ಸೈಯದ್ ರಬಿವುಲ್ಲಾ, ಸುಬ್ರಹ್ಮಣ್ಯೆ ಮತ್ತು ಒಂದನೇ ಪ್ರತಿವಾದಿ ಹಾಜರಿದ್ದರು. ಪತ್ರಕ್ಕೆ ಪ್ರತಿವಾದಿಯರೆಲ್ಲರೂ, ಒಂದನೇ ಪ್ರತಿವಾದಿ ಮಕ್ಕಳಾದ ಹಾಫಿಜ್ ವುರ್ ರೆಹಮಾನ್, ಶಫೀನಾ, ಶಬೀನಾ, ತಾಯಿ ಸಮೀನಾ ರವರು ಸಹಿ ಹಾಕಿರುತ್ತಾರೆ. ಅದೇ ರೀತಿ ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ನಾಗರಾಜ ನಾಯ್ಕು , ಬಸವರಾಜ ನಾಯ್ಕು ಮತ್ತು ಸುಬ್ರಹ್ಮಣ್ಯೆ ರವರು ಸಹಿ ಹಾಕಿರುತ್ತಾರೆ. ಸದರಿ ನಾಗರಾಜ ನಾಯ್ಕು ರವರ ತಂದೆಯ ಹೆಸರು ಬದ್ಯಾ ನಾಯ್ಕು ಆಗಿರುತ್ತದೆ. ಸದರಿ ಬಸವರಾಜ ನಾಯ್ಕುರವರ ತಂದೆಯ ಹೆಸರು ನನಗೆ ನೆನಪಿರುವುದಿಲ್ಲ. ಪತ್ರವನ್ನು ಮಧ್ಯಾಹ್ನ ಸುಮಾರು 1 ಗಂಟೆ ಬರೆಯಲು ಪ್ರಾರಂಭಿಸಿ 2.30-3.00 ಗಂಟೆಯವರೆಗೆ ಮುಗಿಸಿರುತ್ತಾರೆ. ಅದನ್ನು ಸುಬ್ರಹ್ಮಣ್ಯೆ ಪತ್ರ ಬರಹಗಾರರು ಬೆರಳಚ್ಚು ಮಾಡಿಸಿರುತ್ತಾರೆ. ಅವರ ಕಛೇರಿ ಅವರ ಮನೆಯಲ್ಲಿಯೇ ಇರುತ್ತದೆ. ಸದರಿ ಪತ್ರದಲ್ಲಿ ನಾನು ಆ ದಿನ 1 ನೇ ಪ್ರತಿವಾದಿಗೆ ರೂ.12,10,000/- ಗಳನ್ನು ಮುಂಗಡವಾಗಿ ಕೊಟ್ಟಿರುತ್ತೇನೆ.

**2.** ನಾನು ಕೇವಲ ಒಂದು ಬ್ಯಾಂಕ್ ಖಾತೆ ಹೊಂದಿದ್ದು ಅದು ಕೆನರಾ ಬ್ಯಾಂಕ್‌ನ ತರೀಕೆರೆ ಶಾಖೆಯಲ್ಲಿರುತ್ತದೆ. ನಾನು 1 ನೇ ಪ್ರತಿವಾದಿಗೆ ರೂ.12,10,000/- ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಕಾರಣ ಅವರಿಗೆ ಮಗನ ಮದುವೆ ಮಾಡಲು ಮತ್ತು ಸಾಮೀಲ್‌ಗೆ ತುಂಡು ತರಲು ನಗದು ಹಣದ ಅವಶ್ಯಕತೆ ಇತ್ತು. ಸದರಿ ಹಣವನ್ನು ನಾನು ಆ ದಿನ ನನ್ನ ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ತಂದು ಕೊಟ್ಟಿರುತ್ತೇನೆ. ಈ ಬಗ್ಗೆ ನನಗೆ ನನ್ನ ಬ್ಯಾಂಕ್ ಖಾತೆ ಸ್ಟೇಟ್‌ಮೆಂಟ್‌ನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

**3**. ನಂತರ ದಿನಾಂಕ 08-10-2013 ರಂದು 1 ನೇ ಪ್ರತಿವಾದಿಯು ನನ್ನಿಂದ ನಾನು ಭಾರತದಲ್ಲಿ ಇಲ್ಲದೇ ಇರುವಾಗ ನನ್ನ ತಮ್ಮನ ಕಡೆಯಿಂದ ಚೆಕ್ ಮೂಲಕ ರೂ.1,00,000/- ಗಳನ್ನು ಪಡೆದು ಇನ್ನೊಂದು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಂತರ ದಿನಾಂಕ 25-08-2014 ರಂದು ನಾನು ವಾಪಸ್ಸು ಭಾರತಕ್ಕೆ ಬಂದಾಗ 1 ನೇ ಪ್ರತಿವಾದಿಯು ನನ್ನಿಂದ ನಗದು ರೂಪದಲ್ಲಿ ರೂ.1,00,000/- ಗಳನ್ನು ಪಡೆದು ಮೂರನೇ ಕರಾರು ಪತ್ರವನ್ನು ಮತ್ತು ಶರಾ ಬರೆದುಕೊಟ್ಟಿರುತ್ತಾರೆ. ಸದರಿ ಶರಾಗೆ ನಾಗಾರಾಜ ನಾಯ್ಕ, ಬಸವರಾಜ ನಾಯ್ಕ ಮತ್ತು ಇತರರು ಸಹಿ ಹಾಕಿರುತ್ತಾರೆ. ಅದೇ ರೀತಿ 25-08-2014 ರ ಕರಾರು ಪತ್ರಕ್ಕೆ ಪ್ರತಿವಾದಿಯ ಕುಟುಂಬದವರೆಲ್ಲರು ಮತ್ತು ನಾಗಾರಾಜ ನಾಯ್ಕ ಮತ್ತು ಬಸವರಾಜ ನಾಯ್ಕ ಸಹಿ ಹಾಕಿರುತ್ತಾರೆ. ಸದರಿ ಕರಾರನ್ನು ಸಹ ಸುಬ್ರಹ್ಮಣ್ಯರವರ ಮನೆಯಲ್ಲಿ ಬರೆಯಲಾಗಿರುತ್ತದೆ. ಅದನ್ನು ಮಧ್ಯಾಹ್ನ 1.30 ಗಂಟೆಗೆ ಬರೆಯಲು ಪ್ರಾರಂಭಿಸಿ ಮಧಾಹ್ನ 3.00 ಗಂಟೆಗೆ ಮುಗಿಸಲಾಗಿರುತ್ತದೆ. ದಿನಾಂಕ 20-08-2013 ರಂದು ನಾನು ಭಾರತದಲ್ಲಿ ಹಾಜರಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಆ ದಿನ ಭಾರತದಲ್ಲಿ ಇರಲಿಲ್ಲ ಮತ್ತು ಯು.ಎ.ಇ. ಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಆ ದಿನ ನಾನು ಹಾಜರಿದ್ದೆ ಎಂದು ತೋರಿಸಲು ನನ್ನ ಪಾಸ್‌ಪೋರ್ಟ್ ಅನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ದಿನಾಂಕ 20-08-2013 ರ ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ನಾನು ಕೇವಲ ದಿನಾಂಕ 25-08-2014 ರ ಕರಾರು ಪತ್ರದಲ್ಲಿ ಸಹಿ ಮಾಡಿರುತ್ತೇನೆ.

4. ನಾನು ಈ ದಾವೆಯನ್ನು ಮೊದಲು ಎಸ್‌ಪಿಎ ಹೊಲ್ಡರ್ ಅಂದರೆ ನನ್ನ ತಮ್ಮನ ಮೂಲಕ ದಾಖಲಿಸಿದ್ದೆ. ಈ ಕುರಿತು ನಾನು ಅವರಿಗೆ ಎಸ್‌ಪಿಎ ಬರೆದುಕೊಟ್ಟಿದ್ದೆ. ನಿಪಿ.1 ರಲ್ಲಿ ಕೊನೆಯ ಪುಟದಲ್ಲಿ ಇರುವ 1 ನೇ ಸಹಿ ನನ್ನದಾಗಿರುತ್ತದೆ. ದಿನಾಂಕ 17-12-2021 ರಂದು

ಅಸಲು ದಾವೆ ನಂ.37/2022

ಪಿ.ಡಬ್ಲೂಃ 2

ನಾನು ಭಾರತದಲ್ಲಿ ಇರಲಿಲ್ಲ ಮತ್ತು ನಿಪಿ.1 ಕ್ಕೆ ನಾನು ಯಾವ ದಿನಾಂಕದಂದು ಸಹಿ ಮಾಡಿರುತ್ತೇನೆ ಎಂದುನನಗೆ ನೆನಪಿರುವುದಿಲ್ಲ.

(ಈ ಹಂತದಲ್ಲಿ ಮುಂದೂವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

**(ಮುಜಫರ್)**

ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,

ತರೀಕೆರೆ .